# ಸರ್ವ ಶಿಕ್ಷಣ ಅಭಿಯಾನ: ಎಡವಿದ್ದೆಲ್ಲಿ?

ಶಾಲಾ ಶಿಕ್ಷಕರಿಗೆ ಆಂತರಿಕ ತರಬೇತಿ ಶಿಬಿರಗಳನ್ನು ನಡೆಸುವುದರಲ್ಲಿ ಕರ್ನಾಟಕ ಶೂನ್ಯ ಸಾಧನೆ ಮಾಡಿರುವುದು ಆತಂಕದ ಸಂಗತಿ. ಬಹುತೇಕ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಲು, ಸರ್ಕಾರಿ ಶಾಲೆಗಳ ಬೋಧನಾ ಗುಣಮಟ್ಟ ಕುಸಿಯುತ್ತಿರುವುದೇ ಕಾರಣ ಎಂದು ಸಮೀಕ್ಷೆಯೊಂದು ತಿಳಿಸಿದೆ.

ಆರರಿಂದ ಹದಿನಾಲ್ಕು ವರ್ಷಗಳೊಳಗಿನ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ಒದಗಿಸುವ ಗುರಿಯೊಂದಿಗೆ ಆರಂಭವಾದದ್ದು ಸರ್ವ ಶಿಕ್ಷಣ ಅಭಿಯಾನ. ಇದರ ಅನುಷ್ಠಾನದಲ್ಲಿ ಕರ್ನಾಟಕದ ಸಾಧನೆ ಈ ವರ್ಷ ತೀರಾ ಕಳಪೆ ಎಂಬ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ವರದಿ, ಮುಗ್ಧ ಮಕ್ಕಳ ಭವಿಷ್ಯ ರೂಪಿಸುವಲ್ಲಿ ನಾವು ಮತ್ತೆ ಮತ್ತೆ ಎಡವುತ್ತಿರುವುದೇಕೆ ಎಂಬುದನ್ನು ಆತ್ಮವಿಮರ್ಶೆಗೆ ಹಚ್ಚುವಂತಿದೆ. ಕಳೆದ ಆರು ತಿಂಗಳಿಗೆ ನಿಗದಿಪಡಿಸಿದ ಗುರಿಯನ್ನು ತಲುಪಲು ಕರ್ನಾಟಕ ವಿಫಲವಾಗಿದ್ದು, ನೂರು ಅಂಕಗಳಿಗೆ ಕೇವಲ 41–50ರ ಶ್ರೇಣಿಯನ್ನಷ್ಟೇ ಪಡೆದಿದೆ. ಈ ನಿಟ್ಟಿನಲ್ಲಿ ಕರ್ನಾಟಕದ ಕಳಪೆ ಸಾಧನೆ, ಬಿಹಾರವನ್ನು ಹೋಲುತ್ತಿದೆ. ನೆರೆಯ ರಾಜ್ಯಗಳಾದ ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿ ನಿಂತಿದ್ದು, ಸದ್ಯಕ್ಕಂತೂ ಕರ್ನಾಟಕದ ವೈಫಲ್ಯ ತಲೆತಗ್ಗಿಸುವಂತಿದೆ.

ವಿದ್ಯಾರ್ಥಿಗಳ ಆಧಾರ್ ಸಂಖ್ಯೆ ಜೋಡಣೆ, ಸಮವಸ್ತ್ರ ಹಾಗೂ ಪಠ್ಯಪುಸ್ತಕ ವಿತರಣೆಯಲ್ಲಿ ಕರ್ನಾಟಕ ಉದ್ದೇಶಿತ ಗುರಿ ತಲುಪಿದರೂ, ಕೆಲವು ಪ್ರಮುಖ ವಿಭಾಗಗಲ್ಲಿ ಸಾಧನೆ ಮಾಡಲು ಎಡವಿದೆ. ಶಾಲೆಗಳಲ್ಲಿ ಮಕ್ಕಳ ಕಲಿಕಾ ಮಟ್ಟ ಸುಧಾರಣೆ, ಇದಕ್ಕಾಗಿ ಶಿಕ್ಷಕರಿಗೆ ಆಂತರಿಕ ತರಬೇತಿ ನೀಡುವುದು, ಉತ್ತಮ ಬೋಧನೆ ಮತ್ತು ಶಿಕ್ಷಣ ವ್ಯವಸ್ಥೆಯಿರುವ ನಗರ ಪ್ರದೇಶಗಳ ಶಾಲೆಗಳನ್ನು ಗ್ರಾಮೀಣ ಶಾಲೆಗಳ ಜೊತೆ ಜೋಡಿಸಲು ರಾಜ್ಯ ವಿಫಲವಾಗಿದೆ. ರಾಜ್ಯದ ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆ ವಿಭಾಗವು, ಶಾಲೆ ತ್ಯಜಿಸಿದ ಮಕ್ಕಳನ್ನು ಮರಳಿ ಶಿಕ್ಷಣವಾಹಿನಿಗೆ ತರುವಲ್ಲಿ ಎಡವಿದ್ದು ಪ್ರಮಾದವೇ ಸರಿ.

2001ರಲ್ಲಿ ಆರಂಭವಾದ ಸರ್ವ ಶಿಕ್ಷಣ ಅಭಿಯಾನದ ಉದ್ದೇಶಗಳನ್ನು ಉಚಿತ ಮತ್ತು ಕಡ್ಡಾಯ ಶಿಕ್ಷಣದ ಮಸೂದೆ (ಆರ್‌ಟಿಇ) ಇನ್ನಷ್ಟು ಬಲಪಡಿಸಿದೆ ಎನ್ನಬಹುದು. ಇದಕ್ಕಾಗಿ ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಪ್ರಸಕ್ತ ಸಾಲಿಗೆ ರಾಜ್ಯದ 1800 ಕೋಟಿ ರೂಪಾಯಿ ಯೋಜನೆಗೆ ಅನುಮೋದನೆ ನೀಡಿದ್ದು ತನ್ನ ಪಾಲಿನ 400 ಕೋಟಿ ರೂಪಾಯಿ ನೀಡಿದೆ.

ರಾಜ್ಯದಲ್ಲಿ 50 ಸಾವಿರಕ್ಕೂ ಅಧಿಕ ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, 50 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ಶೇ. 99ರಷ್ಟು ಮಂದಿ ಆರ್ಥಿಕವಾಗಿ ಕೆಳವರ್ಗದವರು. ಹಣಕಾಸು ತೊಂದರೆ, ಪೋಷಕರ ತಿಳುವಳಿಕೆಯ ಕೊರತೆ ಮುಂತಾದ ಹಲವು ಸಮಸ್ಯೆಗಳಿಂದಾಗಿ, ಶಿಕ್ಷಣವನ್ನು ಮಧ್ಯದಲ್ಲೇ ಮೊಟಕು ಮಾಡಿ ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಸಾಕಷ್ಟಿದೆ. ನಾಲ್ಕು ವರ್ಷಗಳ ಹಿಂದೆ, 2013ರಲ್ಲಿ ನ್ಯಾಯಾಲಯದ ಮಧ್ಯಪ್ರವೇಶದಿಂದಾಗಿ ನಡೆದ ವೈಜ್ಞಾನಿಕ ಸಮೀಕ್ಷೆಯಿಂದ ರಾಜ್ಯದಲ್ಲಿ ಇಂತಹ ಮಕ್ಕಳ ಸಂಖ್ಯೆ 1.7 ಲಕ್ಷಕ್ಕಿಂತಲೂ ಅಧಿಕ ಎಂಬುದು ಬಹಿರಂಗವಾಗಿತ್ತು. ‘ಸಾರ್ವಜನಿಕ ಶಿಕ್ಷಣ ಇಲಾಖೆಯ ಜೊತೆ ಕೆಲವು ಸ್ವಯಂಸೇವಾ ಸಂಸ್ಥೆಗಳು ಕೈ ಜೋಡಿಸಿದ್ದರಿಂದ ಡ್ರಾಪೌಟ್ ಮಕ್ಕಳ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತ ಬಂದಿದೆ. ಹೈಕೋರ್ಟ್ ಸೂಚಿಸಿದಂತೆ ಸೊನ್ನೆಗೇನೂ ಇಳಿದಿಲ್ಲ. ಉತ್ತರ ಕರ್ನಾಟಕದಲ್ಲಿ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ’ ಎನ್ನುತ್ತದೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವರದಿ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ಒಟ್ಟು 17,005 ವಿದ್ಯಾರ್ಥಿಗಳು ಶಾಲೆಗಳಿಂದ ಹೊರಗುಳಿದಿದ್ದು, ಸೆಪ್ಟೆಂಬರ್‌ವರೆಗೆ 8100 ಮಕ್ಕಳನ್ನು ಮರಳಿ ಶಾಲೆಗೆ ಸೇರಿಸುವ ಕೆಲಸ ಪೂರ್ಣಗೊಂಡಿದೆ ಎಂದು ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕ ಎಂ.ಟಿ.ರೇಜು ಅವರೇ ಬಹಿರಂಗಪಡಿಸಿದ್ದಾರೆ. ಇದು ಸ್ವಲ್ಪ ಮಟ್ಟಿಗೆ ಸಮಾಧಾನ ತಂದಿದೆ. ಆದರೆ ವಿವಿಧ ಇಲಾಖೆಗಳ ನಡುವಿನ ಸಮನ್ವಯದ ಕೊರತೆ ಈ ವೈಫಲ್ಯಕ್ಕೆ ಕಾರಣವೇ ಎನ್ನುವುದು ಗೊತ್ತಾಗಬೇಕಿದೆ. ಶಿಕ್ಷಣ ಇಲಾಖೆಯ ಜೊತೆಗೆ ನಗರಾಭಿವೃದ್ಧಿ, ಪೊಲೀಸ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸಮಾಜ ಕಲ್ಯಾಣ ಇಲಾಖೆಗಳೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಿಕ್ಷಣದ ಮುಖ್ಯ ವಾಹಿನಿಗೆ ಸೇರಿಸಲು ಕೈ ಜೋಡಿಸಬೇಕಾಗುತ್ತದೆ. ಶಾಲೆಯನ್ನು ಅರ್ಧಕ್ಕೆ ಬಿಟ್ಟ ಮಕ್ಕಳ ಹಾಗೂ ಅವರ ಪೋಷಕರ ಮನವೊಲಿಸುವುದು ಸುಲಭವೂ ಅಲ್ಲ ಎಂಬುದು ಇಲಾಖಾ ಅಧಿಕಾರಿಗಳ ಅಂಬೋಣ. ಸರ್ಕಾರ ಜಾರಿಗೆ ತಂದಿರುವ ಬಿಸಿಯೂಟ, ಕ್ಷೀರಭಾಗ್ಯ ಮೊದಲಾದ ಯೋಜನೆಗಳಿಂದ ಇಷ್ಟು ಮಕ್ಕಳಾದರೂ ಮರಳಿ ಬಂದಿದ್ದಾರೆ ಎಂಬುದು ಸಮಾಧಾನಕರ ಸಂಗತಿ.

ಶಾಲಾ ಶಿಕ್ಷಕರಿಗೆ ಆಂತರಿಕ ತರಬೇತಿ ಶಿಬಿರಗಳನ್ನು ನಡೆಸುವುದರಲ್ಲಿ ಕರ್ನಾಟಕ ಶೂನ್ಯ ಸಾಧನೆ ಮಾಡಿರುವುದು ಆತಂಕದ ಸಂಗತಿ. ಬಹುತೇಕ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಲು, ಸರ್ಕಾರಿ ಶಾಲೆಗಳ ಬೋಧನಾ ಗುಣಮಟ್ಟ ಕುಸಿಯುತ್ತಿರುವುದೇ ಕಾರಣ ಎಂದು ಸಮೀಕ್ಷೆಯೊಂದು ತಿಳಿಸಿದೆ. ‘ಇದು ಆರು ತಿಂಗಳಿಗೆ ನಿಗದಿಪಡಿಸಿದ್ದ ಗುರಿ. ಮುಂದಿನ ಆರು ತಿಂಗಳಲ್ಲಿ ಶೇ.90ರಷ್ಟು ಗುರಿ ತಲುಪುತ್ತೇವೆ’ ಎಂದು ಎಂ.ಟಿ.ರೇಜು ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅವರ ಮಾತು ಸತ್ಯವಾಗುವಂತೆ ಸಂಬಂಧಿಸಿದ ಎಲ್ಲರೂ ಶ್ರಮಿಸಬೇಕಿದೆ.

■ ಸುಧಾ ಹೆಗಡೆ



ಈಶ್ವರ್